ತೀರಿಕೊಂಡು ಹದಿನೈದು ವರ್ಷ ಆಗೈತೆ. ಜೀವ್ನಕ್ಕೆ ಏನೂ ಆಧಾರ ಇಲ್ಲ. ಹೆಂಗಾರು ಮಾಡಿ ಇವಳಿಗೂ ಪೆನ್‌ಶನ್ ಬರಂಗೆ ಮಾಡಿ' ಅಂದರು. ಅದಕ್ಕೆ ಅವರು, 'ಅವ್ರಿಗೆ ರಿಟೈರಾಗಿ ಮೂರು ವರ್ಷ ಆಯ್ತು. ಈಗ ಆರು ತಿಂಗಳ ಹಿಂದೆ ಹಾರ್ಟ್ ಅಟ್ಯಾಕ್‌ನಲ್ಲಿ ಹೋಗ್ಬಿಟ್ರಲ್ಲ... ಈ ಹುಡುಗಿ ಹೆಸರೇನು?' ಅಂತ ಕೇಳಿದ್ರು. 'ಖತೀಜಾ' ಅಂದ ಮಾಮ. ಅವ್ರು ನಂಗೆ ಬೈದರು... 'ಏನಮ್ಮ ನಿಂಗೆಷ್ಟು ವರ್ಷ? ಇಷ್ಟು ಚಿಕ್ಕ ಹುಡುಗೀನ ರಿಟೈರ್ಮೆಂಟಿಗೆ ಬಂದಿರೋ ಗಂಡಸಿಗೆ ಕೊಟ್ಟು ಮದ್ವೆ ಮಾಡಿದ್ದೀರಲ್ಲ ನಿಮ್ಗೆ ಬುದ್ಧಿ ಇಲ್ವ? ನಿಂಗಾದ್ರು ಗೊತ್ತಾಗಬೇಡವೇನಮ್ಮ? ಎಷ್ಟು ವರ್ಷ ನಿಂಗೆ?' ಅಂತ ಕೇಳಿದ್ರು. ಮೂವತ್ತೈದು ಅಂದೆ. ಈಗೇನೂ ಮಾಡಕ್ಕಾಗಲ್ಲ. ಯಾರ ಹೆಸರನ್ನು ಪೆನ್‌ಶನ್‌ಗೆ ಕೊಟ್ಟಿರ್ತಾರೋ ಅವರಿಗೆ ಮಾತ್ರ ಸರ್ಕಾರ ಪೆನ್‌ಶನ್ ಕೊಡುತ್ತೆ. ನೀವೇ ನೋಡಿ ಅಂತ ಆ ಬುಕ್ಕು ತೆಗೆದು ತೋರಿಸಿದ್ರು. ಮಿಯಾ ಜೊತೆ ಅವ್ರ ದೊಡ್ಡ ಹೆಣ್ತಿ ಫೋಟೊ ಎರಡನೇ ಹೆಣ್ತಿ ಫೋಟೊಗಳು ಇದ್ವು. ನನ್ನ ಫೋಟೊ ಹೆಸರು ಎರಡೂ ಇರ್ಲಿಲ್ಲ' ಎನ್ನುವಾಗ ಅವಳೆದೆಯ ತಳಮಳವೆಲ್ಲ ಒಂದು ಸಾರಿ ಕಣ್ಣಿಂದಿಳಿದು ಕಪಾಲಕ್ಕೆ ಬಂತು. 'ಸರಿ ಆಮೇಲೇನಾಯಿತು?' ಎಂದ ಫಾತುಮ್ಮಳಿಗೆ ಸಿಡುಕುತ್ತ, 'ಇನ್ನೇನಾಗುತ್ತೆ... ಬಾಯಿಗೆ ಬಂದ್ಹಂಗೆ ಬೈದರು' ಎಂದ ಮಗಳಿಗೆ, 'ಅದೇನು ಬೈದರು ಅದನ್ನ ಹೇಳು' ಎಂದು ಫಾತುಮ್ಮಳು ಸಿಡುಕಿದಳು.

'ಅವರಂದ್ರು... ಇಲಿಯಾಸ್ ಪಾಶಾನ ಕೊನೇ ಹೆಂಡತಿ 35 ವರ್ಷದವಳು. ಈಗ ನೀವು 3 ಜನರಿಗೂ ಪೆನ್‌ಶನ್ ಹಂಚಿಕೆಯಾಗುತ್ತದೆ. ಆದ್ರೆ ನಿಮ್ಗೆ ಇನ್ನೂ ಎಷ್ಟು ವರ್ಷ ಪೆನ್‌ಶನ್ ಕೊಡಬೇಕು ಸರ್ಕಾರ? ನಿಮಗೀಗ ಮೂವತ್ತೈದು... ಕಡೇ ಪಕ್ಷ ಇನ್ನೂ ನಲವತ್ತು ವರ್ಷ ಕೊಡಬೇಕಾಗುತ್ತೆ. ಅಂದ್ರೆ ಇಲಿಯಾಸ್ ಪಾಶಾ ಸತ್ತು ನಲವತ್ತು ವರ್ಷದ ತನಕ... ಎಲ್ಲ ತೆರಿಗೆದಾರರ ಹಣ' ಎಂದು ನಗಾಡಿದರು. ಆ ನಗುವಿನ ವ್ಯಂಗ್ಯ ಸರಿಯಾಗಿ ಅರ್ಥವಾಗಲಿಲ್ಲವಾದರೂ ಭೂಮಿ ಬಾಯಿಬಿಟ್ಟಂತೆ ಅಪಮಾನಿತಳಾಗಿದ್ದಳು ಖತೀಜಾ.

'ಮತ್ತೆ ಏನ್ ಮಾಡದು ಈಗ? ಹಂಗಾರೆ ನಮ್ಗೆ ಬರಕ್ಕಿಲ್ವ ಪೆನ್‌ಶನ್ನು' ಎಂದು ಆತಂಕದಿಂದ ಪ್ರಶ್ನಿಸಿದ ತಾಯಿಗೆ, 'ಏನಾಗುತ್ತೋ ಗೊತ್ತಿಲ್ಲ ಅಮ್ಮಿ, ಅವ್ರು ಹೇಳಿದ್ರು... ಈಗ್ಲೂ ಆಗುತ್ತೆ. ನಿಮ್ಮ ಮದ್ವೆ ಸರ್ಟಿಫಿಕೇಟ್ ತಂದು ಕೊಡಿ. ನಾನೇ ಬೇಕಾದ್ರೆ ಕೋರ್ಟ್‌ಗೆ ಕಳಿಸ್ತೀನಿ ಕೋರ್ಟಿಂದ ನಮ್ಗೆ ಆದೇಶ ಬಂದ ಮೇಲೆ ನಿಮ್ಮ ಹೆಸ್ರು ಸೇರಿಸಬಹುದು. ಮೊದ್ಲು ಆ ಕೆಲಸ ಮಾಡ್ಕೊಂಬನ್ನಿ ಅಂದ್ರು' ಎಂದಳು ಉಗುಳು ನುಂಗುತ್ತಾ.

ತನ್ನ ಮಗಳು ಖತೀಜಾಳ ಮದುವೆಯ ಆ ದಿನಗಳು ನೆನಪಾಗುತ್ತಾ ಎದೆಯೊಳಗೊಂದು ಕೊಟ್ಟಣ ಶುರುವಾಯ್ತು ಫಾತುಮ್ಮಳಿಗೆ. ತಮ್ಮ ಮನೆಗೆ ಮೀಟರ್ ರೀಡಿಂಗಿಗೆ ಬರುತ್ತಿದ್ದ ಶಿವಣ್ಣನವರು ವರ್ಗವಾಗಿ ಆ ಜಾಗಕ್ಕೆ ಬಂದ ಇಲಿಯಾಸ್ ತಮ್ಮ ಅಳಿಯನಾಗುತ್ತಾನೆಂಬ ಸಣ್ಣ ಸುಳಿವೂ ಇರಲಿಲ್ಲ ಫಾತುಮ್ಮಳಿಗೆ. ಮೊದಲ ಬಾರಿ ಅವರು ಬಂದಾಗ ತಾಯಿ ಮಗಳಿಬ್ಬರು ಅಂಗಳದಲ್ಲಿ ಹಗ್ಗ ಹೆಣೆಯುತ್ತಾ ಕೂತಿದ್ದರು. ಫಾತುಮ್ಮಳ ಗಂಡ ಹಸನ್ ಹಗ್ಗ ಹೆಣೆಯುವ ಕಾಯಕದಲ್ಲಿ ಲಾಗಾಯ್ತಿನಿಂದ ತೊಡಗಿಕೊಂಡಿದ್ದ. ಇದ್ದೊಂದು ತುಂಡು ಹೊಲ ಯಾವಾಗಲೋ ಕಷ್ಟಕ್ಕೆ ಮಾರಿಕೊಂಡಿದ್ದ ಕುಟುಂಬ. ದುಬಾಯಿಯಲ್ಲಿದ್ದ ಅವರ ಜನವೇ ಆದ ದೊಡ್ಡ ಶ್ರೀಮಂತರೊಬ್ಬರು ಬಡವರಿಗೆಂದು ಜಾಂದಾಳ್ ಕೊಪ್ಪಲಿನಲ್ಲಿ ಕಟ್ಟಿಸಿಕೊಟ್ಟ ಸಾಲು ಮನೆಗಳಲ್ಲಿ ಒಂದು ಮನೆ ಇವರಿಗೂ ಬಂದಿತ್ತು. ಪುಟ್ಟದಾದರೂ ಅಚ್ಚುಕಟ್ಟಾದ ಹೆಂಚಿನ ಮನೆ. ಮನೆಯ ಮುಂದೆ ಒಂದು ವಿಶಾಲ ಅಂಗಳ. ಹಿತ್ತಲಲ್ಲಷ್ಟು ಜಾಗ... ಆ ಮನೆಯಲ್ಲಿದ್ದುಕೊಂಡು ಕತ್ತಾಳೆ ನಾರುತಂದು ಹಗ್ಗಹೊಸೆದು ಮಾರುವುದರಿಂದ ಹೊಟ್ಟೆ ಹೊರೆಯುವ ಕುಟುಂಬವದು. ನಾರಿಗಾಗಿ ಕತ್ತಾಳೆ ಕಡಿದುತಂದು ಕೊಟ್ಟರೆ ತೊಟ್ಟಿ ನೀರಿನಲ್ಲಿ ನೆನೆಸಿ ಕೊಳೆಯಲಿಟ್ಟು, ಆಮೇಲೆ ನಾಜೂಕಾಗಿ ಬಿಡಿಸಿಕೊಡುತ್ತಿದ್ದುದು ಫಾತುಮ್ಮ ಖತೀಜಾಳ ಕೆಲಸವೇ ಆಗಿತ್ತು.

ಮಗಳು ಬೆಳೆದಂತೆಲ್ಲ ಅವಳ ಕುರಿತಾದ ಕನಸುಗಳೂ ಬೆಳೆಯುತ್ತಿದ್ದವು. ಗಂಡಹೆಂಡತಿಗೆ. ಬಡತನಕ್ಕೆ ಕನಸುಗಳಿರಬಾರದೆಂದಿಲ್ಲವಲ್ಲ! ಮಗಳು ವಯಸ್ಸಿಗೆ ಬರುವಾಗ ದಲ್ಲಾಳಿಗಳ ಮೂಲಕ ವರಾನ್ವೇಷಣೆ